ವಿತರಣೆ ಗೊಂಡರು. ಜಳಕ ಮತ್ತು ನಾಷ್ಟಾ ಮುಗಿದ ಮೇಲೆ ಅವರು ಕಿಟಕಿಯಿಂದ ಎದುರಿನ ಬದಿಯಲ್ಲಿ ರಸ್ತೆ ಆಚೆ ಇದ್ದ ಇನ್ನೊಂದು ದೊಡ್ಡ ಕಟ್ಟಡವನ್ನು ವೀಕ್ಷಿಸತೊಡಗಿದರು. ಬಾಲ್ಕನಿಯಲ್ಲಿ ನಿಂತು ಕೈಯಲ್ಲಿ ದುರ್ಬೀನು ಹಿಡಿದು ನೋಡತೊಡಗಿದರು. ಕಾರುಗಳು ಒಳ ಹೋಗುತ್ತಿದ್ದವು, ಹೊರ ಬರುತ್ತಿದ್ದವು. ಫಕೀರನ ಕೈಗೂ ದುರ್ಬಿನು ಕೊಟ್ಟು "ನೋಡು, ಸುರೇಶಣ್ಣ ಕಾಣ್ತಾರೇನು?" ಎಂದ.

ಫಕೀರ ಜೀವನದಲ್ಲಿ ಮೊದಲ ಬಾರಿಗೆ ದುರ್ಬೀನು ಹಿಡಿದಿದ್ದ. ದೂರದ್ದೆಲ್ಲ ತನ್ನ ಎದುರೇ ಕಾಣುವಂತಾದೊಡನೆ ಅವನು ಎಷ್ಟು ಉತ್ತೇಜಿತನಾದನೆಂದರೆ, "ಎಲ್ಲಾ ಇಲ್ಲೇ ಕಾಣಾಕತೈತಿ" ಎಂದು ಕೂಗಿ ಅತ್ತ ಇತ್ತ ಸರಿದು ಮತ್ತೆ ಮತ್ತೆ ನೋಡತೊಡಗಿದ. ಎಷ್ಟೊಂದು ಮನುಷ್ಯರು, ಎಷ್ಟೊಂದು ಕಾರುಗಳು, ಎಷ್ಟೊಂದು ಬಣ್ಣಗಳು!

ಫಕೀರನಿಗೆ ಧೋತರ ತೆಗೆದು ಪ್ಯಾಂಟು, ಟೀಶರ್ಟ್ ಧರಿಸಲು ಹೇಳಿದರು. ಇಲ್ಲಿಯೇ ಪೇಚಾಟ ಪ್ರಾರಂಭವಾಯಿತು. ಅವನಿಗೆ ಒಳಗೆ ಚಡ್ಡಿ ಬೇರೆ! ಆದರೂ ಅವರ ಸಹಾಯದಿಂದ ಫಕೀರ ಪ್ಯಾಂಟು ಟೀ ಶರ್ಟ್ ಧರಿಸಿ ನಿಂತ. ಅವನು ಕೂದಲು ಬಾಚಿಕೊಂಡ. ಅವನ ಮುಖಕ್ಕೆ ನವಿರಾಗಿ ಪೌಡರ ಬಳಿದರು. ಕನ್ನಡಿಯಲ್ಲಿ ತನ್ನನ್ನೇ ನೋಡಿಕೊಂಡ ಫಕೀರ ಮತ್ತಷ್ಟು ಗಾಬರಿಯಾದ.

"ನೋಡು ಈಗ ನಿನ್ನ ಹೆಸರು ಗಾಯಕವಾಡ. ಆ ಎದುರಿನ ದೊಡ್ಡ ಹೋಟೆಲ್ ಐತಲ್ಲ ಅದರಾಗ ಗಾಯಕವಾಡ ಅನ್ನೋ ಹೆಸರಿನಾಗ ನಿನಗೊಂಡು ದೊಡ್ಡ ಖೋಲಿ ಇರತೈತಿ. ನೀನು ಅಲ್ಲಿ ಒಳಗ ಹೋದ ಕೂಡ್ಲೆ ಕೆಂಪು ಅಂಗಿಯೊಬ್ಬಾವ ನಿನ್ನ ಕರಕೊಂಡು ಹೊಕ್ತಾನ. ಇಲ್ನೋಡು ಇದು ಗಾಯಕವಾಡ ಅನ್ನೊ ಹೆಸರಿನ ಕಾರ್ಡು. ಇದು ನಿನ್ನ ಫೋಟೊ ಇರೋ ವೋಟರ್ ಕಾರ್ಡು. ಕೆಂಪಂಗಿಯವ ಎಲ್ಲಾ ಮಾಡ್ತಾನೆ. ನೀನು ಸುಮ್ನ ಏನು ಕೇಳಿದರೂ 'ಓ.ಕೆ.' 'ಓ.ಕೆ.' ಅಂತಿರಬೇಕು. ನಿನ್ನ ಹೆಸರೇನು?"

"ಫಕೀರ."

"ಥೂ, ಅಲ್ಲೋ ಮಾರಾಯ ಗಾಯಕವಾಡ."

"ಹೂಂನ್ರಿ, ಗಾಯಕವಾಡ."

"ಹಾಂ, ಹಂಗ ಹೇಳು."

"ಏನು ಕೇಳಿದರೂ ಏನನಬೇಕು?"

"ವಾಕೆ."

"ವಾಕೆ ಅಲ್ಲ, ಓಕೆ. ನಿನಗೊಂದು ಸೂಟ್‌ಕೇಸ್ ಕೊಡ್ತಿವಿ, ನೀನು ಅದನ್ನ ತಗೊಂಡು ಹೋಗಿ ಸುರೇಶಣ್ಣಂಗ ಕೊಟ್ಟು, ಅವರ ಕಾಲು ಹಿಡದು ಹೊರಗ ಕರಕೊಂಡು ಬರಬೇಕು. ನೀನು ಹೊರಗ ಬಂದ ಮ್ಯಾಗ ನಿನಗೊಂದು ಸಣ್ಣ ಸೂಟ್‌ಕೇಸ್ ಕೊಟ್ಟು, ನಿನ್ನ ಹುಬ್ಬಳ್ಳಿ ಬಸ್ ಹತ್ತಸ್ತೇವಿ."

"ಮತ್ತ ನನ್ನ ಹೊಸಾ ಅರಿವಿರಿ?"

"ಅಯ್ಯೊ ಅವನ್ನೂ ಅದs ಪೆಟಿಗ್ಯಾಗ ಹಾಕಿ ಕೊಡ್ತಿವಿ. ನಡಿ ಈಗ ಗೇಟ್ ಹತ್ರ ಬಿಡತೇವಿ."

ಎಂದೆಂದೂ ಪ್ಯಾಂಟು, ಚಡ್ಡಿ ಧರಿಸಿರದಿದ್ದ ಫಕೀರ ಗುಪ್ತರೋಗ ಬಂದವರಂತೆ ಅಗಲಗಲ ಕಾಲು ಹಾಕುತ್ತ ಅವರೊಡನೆ ನಡೆದ. ವಿಪರೀತ ಕಾರು, ಬಸ್ಸು, ಆಟೊ ಓಡಾಡುತ್ತಿದ್ದ ರಸ್ತೆಯನ್ನು ಕಷ್ಟಪಟ್ಟು ದಾಟಿ, ಆ ದೊಡ್ಡ ಕಟ್ಟಡದ ಗೇಟಿನ ಬಳಿ ಬಂದು ಫಕೀರನ ಕೈಯಲ್ಲಿ ದೊಡ್ಡ ಸೂಟ್‌ಕೇಸ್ ಕೊಟ್ಟು "ನಡಿ ಇನ್ನ, ಅಲ್ಲೆ ದೊಡ್ಡ ಗಾಜಿನ ಬಾಗಲ ಕಾಣತೈತೆಲ್ಲ, ಅಲ್ಲಿ ತನಕ ಹೋಗು, ಅಲ್ಲೆ ನಿನಗ ಕೆಂಪಂಗಿಯವ ಬಂದು ಕರಕೊಂಡು ಹೋಕ್ತಾನ. ಅವಗ ಕನ್ನಡ ಮಾತಾಡಾಕ ಬರತೈತಿ. ಹೆದರಬ್ಯಾಡ."